KACM210046442023

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಡೂರು**

**::ಉಪಸ್ಥಿತರು::**

ಶ್ರೀಮತಿ ಸವಿತರಾಣಿ, ಬಿ.ಎ.ಎಲ್., ಎಲ್.ಎಲ್.ಬಿ.,
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳು,
ಕಡೂರು.

ದಿನಾಂಕ: **01** ನೇ ಮಾರ್ಚ್ **2025**

**ಸಿ.ಸಿ. ಸಂಖ್ಯೆ 3235/2023**

ಫಿರ್ಯಾದುದಾರರು : ಕರ್ನಾಟಕ ಸರ್ಕಾರವನ್ನು ಪ್ರತಿನಿಧಿಸುವವರು
ಅಬಕಾರಿ ಉಪ ನಿರೀಕ್ಷಕರು,
ಕಡೂರು ವಲಯ.

(ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿ : ಮಲ್ಲಿಕಾರ್ಜುನ ಬಿನ್ ಮರುಳಪ್ಪ,
ಸುಮಾರು 50 ವರ್ಷ ವಯಸ್ಸು, ವ್ಯವಸಾಯ,
ವಾಸಃ ಗಂಗನಹಳ್ಳಿ ಗ್ರಾಮ, ಪಂಚನಹಳ್ಳಿ ಹೋಬಳಿ,
ಕಡೂರು ತಾಲ್ಲೂಕು.

(ಪ್ರತಿನಿಧಿಸುವವರು ಶ್ರೀ ವಿ.ಕೆ.ಆರ್.ವಕೀಲರು )

ತೀರ್ಪು

ಈ ಪ್ರಕರಣದ ಫಿರ್ಯಾದಿ ಚಾಸಾ-1 ಶ್ರೀ ಶಿವರುದ್ರಯ್ಯ ಸಿ, ಅಬಕಾರಿ ಉಪ ನಿರೀಕ್ಷಕರು-2, ಕಡೂರು ವಲಯ ರವರ ಸ್ವ-ವರದಿಯ ಮೇರೆಗೆ ಪ್ರಕರಣ ದಾಖಲಿಸಿಕೊಂಡು

KACM210046442023

ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 14(2), 15, 32(1)ರಡಿಯಲ್ಲಿ ದಂಡನೀಯ ಆರೋಪವನ್ನು ಹೊರೆಸಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2.** <u>ದೋಷಾರೋಪಣಾ ಪಟ್ಟಿಯ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆ</u>**:-**

ದಿನಾಂಕ. 30.03.2023 ರಂದು ಕರ್ನಾಟಕ ವಿಧಾನಸಭಾ ಚುನಾವಣೆ-2023 ರ ಚುನಾವಣಾ ನೀತಿ ಸಂಹಿತೆ ಜಾರಿ ಹಿನ್ನಲೆಯಲ್ಲಿ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ ನಿರ್ದೇಶನದ ಮೇರೆಗೆ ಹಾಗೂ ಅಬಕಾರಿ ಉಪ ಅಧೀಕ್ಷಕರು, ಚಿಕ್ಕಮಗಳೂರು ಉಪ ವಿಭಾಗ ಇವರ ಮಾರ್ಗದರ್ಶನದಲ್ಲಿ ಕಡೂರು ವಲಯದ ಅಬಕಾರಿ ಉಪ ನಿರೀಕ್ಷಕರು-2 ಹಾಗೂ ಸಿಬ್ಬಂದಿಗಳೊಂದಿಗೆ, ಕಡೂರು ನಗರ ಸುತ್ತಮುತ್ತ ಗಸ್ತಿನಲ್ಲಿದ್ದಾಗ, ಮದ್ಯಾಹ್ನ 1.30 ರ ಸಮಯದಲ್ಲಿ ಕಡೂರು ನಗರದಿಂದ 9 ನೇ ಕ್ರಾಸ್ ಹೋಗುವ ರಾಜ್ಯ ಹೆದ್ದಾರಿ 152 ರಸ್ತೆಯಲ್ಲಿನ ಬಿ.ಜಿ.ಎಸ್. ಶಾಲೆಯ ಮುಂಭಾಗದಲ್ಲಿ ಆರೋಪಿಯು ಕೇಸರಿ ಮತ್ತು ಹಳದಿ ಬಣ್ಣದ ಕೈ ಚೀಲದಲ್ಲಿ 90 ಎಂ.ಎಲ್.ನ ರಾಜಾವಿಸ್ಕಿಯ 50 ಮದ್ಯ ತುಂಬಿದ ಸ್ಯಾಚೆಟುಗಳನ್ನು ಯಾವುದೇ ಪರವಾನಗಿಯನ್ನು ಹೊಂದದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡಲು ಇಟ್ಟುಕೊಂಡಿದ್ದು, ಚಾಸಾ-1

ರವರು ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ದಾಳಿ ಮಾಡಿ ಸದರಿ ಮದ್ಯವನ್ನು ವಶಪಡಿಸಿಕೊಂಡಿರುತ್ತಾರೆ. ಆ ಮೂಲಕ ಆರೋಪಿಯು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ.14(2), 15, 32(1) ರಡಿಯಲ್ಲಿ ದಂಡನೀಯ ಆರೋಪವನ್ನು ಹೊರೆಸಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂಬುದಾಗಿರುತ್ತದೆ.

**3.** ತನಿಖಾಧಿಕಾರಿಗಳು ತನಿಖಾ ಕಾರ್ಯ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು, ನ್ಯಾಯಾಲಯವು ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 14(2), 15, 32(1)ರಡಿಯಲ್ಲಿ ಅಪರಾಧಗಳಿಗೆ ಸಂಜ್ಞೇಯತೆಯನ್ನು ತೆಗೆದುಕೊಂಡಿರುತ್ತದೆ.

**4**. ಆರೋಪಿಯು ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ವಕೀಲರ ಮೂಲಕ ಜಾಮೀನು ಅರ್ಜಿ ಸಲ್ಲಿಸಿ, ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ನ್ಯಾಯಾಲಯವು ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಂತೆ ಆರೋಪಿಗೆ ದೋಷಾರೋಪಣಾ ಪಟ್ಟಿಯ ನಕಲನ್ನು ನೀಡಲಾಗಿದೆ.

**5.** ಆರೋಪಿಯ ವಿರುದ್ದ ಕರ್ನಾಟಕ ಅಬಕಾರಿ ಕಾಯ್ದೆ 1965 ಕಲಂ 14(2), 15, 32(1) ರಡಿಯಲ್ಲಿ ರಡಿಯಲ್ಲಿ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿ ಓದಿ

KACM210046442023

ವಿವರಿಸಿ ಹೇಳಿದ್ದು, ಆರೋಪಿಯು ತಾನು ತಪ್ಪು ಮಾಡಿರುವುದಿಲ್ಲವೆಂದು ಹಾಗೂ ವಿಚಾರಣೆ ಆಗಬೇಕೆಂದು ಉತ್ತರಿಸಿರುತ್ತಾರೆ.

**6.** ಅಭಿಯೋಜನಾ ಪಕ್ಷದವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸಲು ತಮ್ಮ ಪರವಾಗಿ ಚಾಸಾ- 1 ರವರನ್ನು ಪ್ರಾಸಾ-1 ಎಂದು, ಚಾಸಾ- 2 ರವರನ್ನು ಪ್ರಾಸಾ-2 ಎಂದು, ಚಾಸಾ-3 ರವರನ್ನು ಪ್ರಾಸಾ-3 ಎಂದು, ಚಾಸಾ-6 ರವರನ್ನು ಪ್ರಾಸಾ-4 ಎಂದು, ಚಾಸಾ-7 ರವರನ್ನು ಪ್ರಾಸಾ-5 ಎಂಬುದಾಗಿ ವಿಚಾರಣೆಗೆ ಒಳಪಡಿಸಿ, ನಿಪಿ 1 ರಿಂದ ನಿಪಿ 11 ರವರೆಗಿನ ದಾಖಲೆಗಳನ್ನು ಹಾಗೂ ರಾಸಾಯನಿಕ ಪರೀಕ್ಷೆಗೆ ಕಳುಹಿಸಿ ವಾಪಾಸ್ಸಾದ ಖಾಲಿ ಮದ್ಯದ ಪೌಚುಗಳು ಹಾಗೂ ಒಂದು ಪ್ಲಾಸ್ಟಿಕ್ ಚೀಲವನ್ನು ಮುದ್ದೆಮಾಲು 1 ಮತ್ತು 2 ಎಂದು ಗುರ್ತಿಸಿಕೊಂಡಿರುತ್ತಾರೆ.

**7.** ಅಭಿಯೋಜನಾ ಪಕ್ಷದವರ ಪರ ಸಾಕ್ಷಿ ವಿಚಾರಣೆ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲು ಮಾಡಲಾಯಿತು. ಆರೋಪಿಯು ತನ್ನ ಹೇಳಿಕೆಯಲ್ಲಿ ಅಭಿಯೋಜನಾ ಪಕ್ಷದವರ ಪರ ಸಾಕ್ಷಿ ನೀಡಿದ ಸಾಕ್ಷಿದಾರರ ಸಾಕ್ಷ್ಯವನ್ನು ಅಲ್ಲಗಳೆದಿದ್ದು, ಅಲ್ಲದೆ ತಮ್ಮ ಪರವಾಗಿ ಸಾಕ್ಷಿದಾರರು ಇಲ್ಲವೆಂದು ನುಡಿದಿದ್ದರಿಂದ ಈ ಪ್ರಕರಣವನ್ನು ವಾದ ಆಲಿಸಲು ಮುಂದೂಡಲಾಯಿತು.

**8.** ಉಭಯ ಪಕ್ಷದವರ ಪರ ವಕೀಲರ ವಾದವನ್ನು ಆಲಿಸಲಾಯಿತು.

KACM210046442023

**9.** ಅಭಿಯೋಜನಾ ಪಕ್ಷದವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳ ರೀತ್ಯಾ ಈ ನ್ಯಾಯಾಲಯದ ತೀರ್ಮಾನಕ್ಕೆ ಉದ್ಭವಿಸುವ ಅಂಶಗಳು ಯಾವುವು ಎಂದರೆಃ-

ಅಂಶಗಳು

**1.** ದಿನಾಂಕ 30.03.2023 ರಂದು ಕರ್ನಾಟಕ ವಿಧಾನಸಭಾ ಚುನಾವಣೆ-2023 ರ ಚುನಾವಣಾ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಮಾನ್ಯ ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆರವರ ನಿರ್ದೇಶನದ ಮೇರೆಗೆ ಹಾಗೂ ಅಬಕಾರಿ ಉಪ ಅಧೀಕ್ಷಕರು ಚಿಕ್ಕಮಗಳೂರು, ಉಪ-ವಿಭಾಗ, ಇವರ ಮಾರ್ಗದರ್ಶನದಲ್ಲಿ ಕಡೂರು ವಲಯದ ಅಬಕಾರಿ ಉಪ ನಿರೀಕ್ಷಕರು-2 ಹಾಗೂ ಸಿಬ್ಬಂಧಿಗಳೊಂದಿಗೆ ಕಡೂರು ನಗರ ಹಾಗೂ ಸುತ್ತ ಮುತ್ತ ಗಸ್ತಿನಲ್ಲಿದ್ದಾಗ ಮದ್ಯಾಹ್ನ 1.30 ಗಂಟೆ ಸಮಯದಲ್ಲಿ ಕಡೂರು ನಗರದಿಂದ 9 ನೇ ಕ್ರಾಸ್ ಗೆ ಹೋಗುವ ರಾಜ್ಯ ಹೆದ್ದಾರಿ- 152 ರಸ್ತೆಯಲ್ಲಿನ ಬಿ.ಜಿ.ಎಸ್. ಶಾಲೆಯ ಮುಂಭಾಗದಲ್ಲಿ ಆರೋಪಿಯು ಕೇಸರಿ ಮತ್ತು ಹಳದಿ ಬಣ್ಣದ ಕೈ ಚೀಲದಲ್ಲಿ 90 ಮಿಲಿಯ 50 ರಾಜವಿಸ್ಕಿ ಸ್ಯಾಚೆಟ್ ಗಳನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದು, ಚಾಸಾ.1 ಶಿವರುದ್ರಯ್ಯ, ಅಬಕಾರಿ ಉಪ ನಿರೀಕ್ಷಕರು-2, ಚಿಕ್ಕಮಗಳೂರು ಉಪ ವಿಭಾಗ ಇವರು ತಮ್ಮ ಸಿಬ್ಬಂದಿ ಹಾಗೂ ಪಂಚರೊಂದಿಗೆ ದಾಳಿ ಮಾಡಿ, ಆರೋಪಿಯು ಅಕ್ರಮವಾಗಿ ಮಾರಾಟ ಮಾಡಲು ದಾಸ್ತಾನು ಹೊಂದಿದ್ದ ಮೇಲೆ ಹೇಳಿದ ಮದ್ಯ ತುಂಬಿದ ಪೌಚುಗಳನ್ನು ವಶಪಡಿಸಿಕೊಂಡಿರುವ ಕಾರಣ ಆರೋಪಿ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂ.14(2), 15, 32(1) ರಡಿಯಲ್ಲಿ ಅಪರಾಧ ಎಸಗಿದ್ದಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ರುಜುವಾತು ಪಡಿಸುವರೇ?

2. ಏನು ಆದೇಶ ?

**10.** ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ:-

KACM210046442023

ಅಂಶ **1:** ನಕಾರಾತ್ಮಕವಾಗಿ

ಅಂಶ **2:** ಅಂತಿಮ ಆದೇಶದಂತೆ **:-**

ಕಾ ರ ಣ ಗ ಳು

**11.** ಅಂಶ **1** ಃ ಅಭಿಯೋಜನೆಯವರ ಪ್ರಕಾರ, ದಿನಾಂಕ 30.03.2023 ರಂದು ಕರ್ನಾಟಕ ವಿಧಾನಸಭಾ ಚುನಾವಣೆ - 2023 ರ ಚುನಾವಣಾ ನೀತಿ ಸಂಹಿತೆ ಜಾರಿ ಹಿನ್ನಲೆಯಲ್ಲಿ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕೆ ಸಂಬಂಧಿಸಿದಂತೆ ಅಬಕಾರಿ ಉಪ ಆಯುಕ್ತರು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ರವರ ನಿರ್ದೇಶನದ ಮೇರೆಗೆ ಹಾಗೂ ಅಬಕಾರಿ ಉಪ ಅಧೀಕ್ಷಕರು, ಚಿಕ್ಕಮಗಳೂರು ಉಪ ವಿಭಾಗ ಇವರ ಮಾರ್ಗದರ್ಶನದಲ್ಲಿ ಕಡೂರು ವಲಯದ ಅಬಕಾರಿ ಉಪ ನಿರೀಕ್ಷಕರು-2 ಹಾಗೂ ಸಿಬ್ಬಂದಿಗಳೊಂದಿಗೆ, ಕಡೂರು ನಗರ ಸುತ್ತಮುತ್ತ ಗಸ್ತಿನಲ್ಲಿದ್ದಾಗ, ಮದ್ಯಾಹ್ನ 01.30 ರ ಸಮಯದಲ್ಲಿ ಕಡೂರು ನಗರದಿಂದ 9 ನೇ ಕ್ರಾಸ್ ಹೋಗುವ ರಾಜ್ಯ ಹೆದ್ದಾರಿ 152 ರಸ್ತೆಯಲ್ಲಿನ ಬಿ.ಜಿ.ಎಸ್. ಶಾಲೆಯ ಮುಂಭಾಗದಲ್ಲಿ ಆರೋಪಿಯು ಕೇಸರಿ ಮತ್ತು ಹಳದಿ ಬಣ್ಣದ ಕೈ ಚೀಲದಲ್ಲಿ 90 ಎಂ.ಎಲ್.ನ ರಾಜಾವಿಸ್ಕಿ ಎಂಬ ಹೆಸರಿನ 50 ಮದ್ಯ ತುಂಬಿದ ಪೌಚುಗಳನ್ನು ಯಾವುದೇ ಪರವಾನಗಿಯನ್ನು ಹೊಂದದೆ ಅಕ್ರಮವಾಗಿ ಸಾರ್ವಜನಿಕರಿಗೆ ಮಾರಾಟ ಮಾಡಲು ಇಟ್ಟುಕೊಂಡಿದ್ದು, ಚಾಸಾ.1 ರವರು ತಮ್ಮ ಸಿಬ್ಬಂದಿ

KACM210046442023

ಹಾಗೂ ಪಂಚರೊಂದಿಗೆ ದಾಳಿ ಮಾಡಿ ಸದರಿ ಮದ್ಯವನ್ನು ವಶಪಡಿಸಿಕೊಂಡಿರುತ್ತಾರೆ ಎಂಬುದಾಗಿರುತ್ತದೆ.

**12.** ಈ ಪ್ರಕರಣದಲ್ಲಿ ಅಭಿಯೋಜನಾ ಪಕ್ಷದವರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವ ಸಲುವಾಗಿ ತಮ್ಮ ಪರವಾಗಿ ಪ್ರಾಸಾ.1 ರಿಂದ ಪ್ರಾಸಾ.5 ರವರನ್ನು ವಿಚಾರಣೆಗೆ ಒಳಪಡಿಸಿ, ಸ್ಥಳ ಮಹಜರನ್ನು ನಿಪಿ.1 ಎಂದು, ಪೋಲೀಸ್ ನೋಟಿಸನ್ನು ನಿಪಿ.2 ಎಂದು, ಪ್ರಾಸಾ.1 ರವರ ಹೇಳಿಕೆಯನ್ನು ನಿಪಿ.3 ಎಂದು, ಪೋಲಿಸ್ ನೋಟಿಸನ್ನು ನಿಪಿ.4 ಎಂದು, ಪ್ರಾಸಾ.2 ರವರ ಹೇಳಿಕೆಯನ್ನು ನಿಪಿ.5 ಎಂದು, ಛಾಯಾಚಿತ್ರವನ್ನು ನಿಪಿ.6 ಎಂದು, ವರದಿಯನ್ನು ನಿಪಿ.7 ಎಂದು, ಪ್ರಥಮ ವರ್ತಮಾನ ವರದಿಯನ್ನು ನಿಪಿ.8 ಎಂದು, ಎಫ್.ಎಸ್.ಎಲ್ ವರದಿ ನೀಡುವಂತೆ ರಾಸಾಯನಿಕ ಪ್ರಯೋಗಾಲಯ, ಚಿತ್ರದುರ್ಗಕ್ಕೆ ಬರೆದ ಪತ್ರವನ್ನು ನಿಪಿ.9 ಎಂದು, ಎಫ್.ಎಸ್.ಎಲ್. ವರದಿಯನ್ನು ನಿಪಿ.10 ಎಂದು, ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ನಿಪಿ.11 ಎಂದು ಹಾಗೂ ರಾಸಾಯನಿಕ ಪರೀಕ್ಷೆಗೆ ಕಳುಹಿಸಿ ವಾಪಾಸ್ಸಾದ ಖಾಲಿ ಮದ್ಯದ ಪೌಚುಗಳು ಹಾಗೂ ಒಂದು ಪ್ಲಾಸ್ಟಿಕ್ ಚೀಲವನ್ನು ಮುದ್ದೆಮಾಲು-1 ಮತ್ತು ಮುದ್ದೆಮಾಲು-2 ಎಂದು ಗುರ್ತಿಸಿಕೊಂಡಿರುತ್ತಾರೆ.

**13.** ಅಭಿಯೋಜನೆಯವರ ಪ್ರಕಾರ ಪ್ರಾಸಾ-4 ರವರು ದೂರುದಾರರು ಹಾಗೂ ದಾಳಿ ಮಾಡಿದ ಬಗ್ಗೆ ಸಾಕ್ಷಿದಾರರಾಗಿರುತ್ತಾರೆ. ಪ್ರಾಸಾ.1 ಮತ್ತು ಪ್ರಾಸಾ.2 ರವರು ಮಹಜರ್

ಸಾಕ್ಷಿದಾರರಾಗಿರುತ್ತಾರೆ. ಪ್ರಾಸಾ.3 ರವರು ದಾಳಿಗೆ ಸಹಕರಿಸಿದ ಬಗ್ಗೆ ಸಾಕ್ಷಿದಾರರಾಗಿರುತ್ತಾರೆ. ಪ್ರಾಸಾ.5 ರವರು ತನಿಖಾಧಿಕಾರಿಯಾಗಿರುತ್ತಾರೆ.

**14.** ಪ್ರಾಸಾ-1 ಮತ್ತು 2 ರವರು ಪಂಚನಾಮಾ ಸಾಕ್ಷಿದಾರರಾಗಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಮಗೆ ಆರೋಪಿಯ ಪರಿಚಯ ಇರುತ್ತದೆ. ನಮ್ಮ ಮುಂದೆ ನಿಪಿ-1 ರಂತೆ ಪೊಲೀಸರು ಮಹಜರ್ ಮಾಡಿರುವುದಿಲ್ಲ ಮತ್ತು ಯಾವುದೇ ಮದ್ಯವನ್ನು ವಶಪಡಿಸಿಕೊಂಡಿರುವುದಿಲ್ಲ. ಸದರಿ ನಿಪಿ-1 ಕ್ಕೆ ನಾವು ದಾರಿಯಲ್ಲಿ ಹೋಗುವಾಗ ಪೊಲೀಸರು ಕರೆದು ಸಹಿ ಪಡೆದಿರುತ್ತಾರೆ. ನಿಪಿ-1 ರಲ್ಲಿ ಏನು ಬರೆದಿರುತ್ತಾರೆಂದು ಮತ್ತು ನಮ್ಮೊಂದಿಗೆ ಇತರರು ಯಾರು ಸಹಿ ಮಾಡಿರುತ್ತಾರೆಂದು ನಮಗೆ ಗೊತ್ತಿಲ್ಲ. ಪೊಲೀಸರು ನಮಗೆ ನಿಪಿ-2 ರಂತೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ. ನಾವು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

**15.** ಅಭಿಯೋಜನೆಯವರ ಪ್ರಕಾರ ಪ್ರಾಸಾ-1 ಮತ್ತು ಪ್ರಾಸಾ-2 ರವರ ಸಮಕ್ಷಮ ಪ್ರಾಸಾ-4 ರವರು ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂಬುದಾಗಿರುತ್ತಾರೆ. ಆದರೆ ಪ್ರಾಸಾ-1 ಮತ್ತು ಪ್ರಾಸಾ-2 ರವರ ಸಾಕ್ಷ್ಯವನ್ನು ಗಮನಿಸಿದಾಗ, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ತಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು

ಪಡಿಸಿಕೊಂಡಿರುವುದಿಲ್ಲ ಎಂದು ನುಡಿದಿರುವುದು ಕಂಡು ಬರುತ್ತದೆ. ಅದು ಅಲ್ಲದೆ ಇವರನ್ನು ಅಭಿಯೋಜನೆಯವರು ಪಾಟೀ ಸವಾಲಿಗೆ ಗುರಿಪಡಿಸಿದಾಗಲೂ ಸಹ ಅಮಾನತ್ತು ಪಂಚನಾಮಾ ಕುರಿತು ಹಾಗೂ ಮಧ್ಯದ ಪೌಚುಗಳನ್ನು ತಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಳ್ಳಲಾಯಿತು ಎಂಬುದರ ಕುರಿತು ಅಭಿಯೋಜನೆಯವರಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುವುದಿಲ್ಲ.

**16.** ಪ್ರಾಸಾ-3 ರವರು ದಾಳಿಗೆ ಸಹಕರಿಸಿದ ಬಗ್ಗೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಇವರು ಪ್ರಾಸಾ-4 ರವರು ಹೇಳಿದಂತೆ ಅವರಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇವರು ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ತಾವು ಘಟನಾ ಸ್ಥಳಕ್ಕೆ ತಲುಪಿದ ನಂತರ ಆರೋಪಿಯ ಹೆಸರು ತನಗೆ ಗೊತ್ತಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಹಾಗೆಯೇ ಉಳಿದಂತೆ ಅವರು ಹಾಕಿದ ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**17.** ಪ್ರಾಸಾ-4 ರವರು ದಾಳಿ ಮಾಡಿ ವರದಿ ನೀಡಿದ ಬಗ್ಗೆ ಸಾಕ್ಷಿದಾರರಾಗಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿಃ30.03.2023 ರಂದು ಮಧ್ಯಾಹ್ನ 1.45 ರ ಸಮಯದಲ್ಲಿ ಕಡೂರು ಸುತ್ತಮುತ್ತ ಗಸ್ತು ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಕಡೂರು ಟೌನ್ ನಿಂದ 9 ನೇ ಕ್ರಾಸ್ ಹೋಗುವ ರಸ್ತೆಯಲ್ಲಿ ಬರುವ ಬಿ.ಜಿ.ಎಸ್. ಶಾಲೆಯ ಹತ್ತಿರ ಒಬ್ಬ

KACM210046442023

ಆಸಾಮಿ ಅಕ್ರಮವಾಗಿ ಮದ್ಯ ಸಾಗಾಣೆ ಮಾಡುತ್ತಿದ್ದಾನೆ ಎಂದು ಬಂದ ಮಾಹಿತಿ ಮೇರೆಗೆ. ನಾವು ಸ್ಥಳಕ್ಕೆ ಹೋದಾಗ ಇಬ್ಬರು ಪಂಚರನ್ನು ಬರಮಾಡಿಕೊಂಡು ನಮ್ಮಗಳ ಪರಿಚಯ ಮಾಡಿಕೊಂಡು ನಮಗೆ ಬಂದ ಮಾಹಿತಿಯನ್ನು ತಿಳಿಸಿ ದಾಳಿಗೆ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡು ಅವರು ಒಪ್ಪಿದ್ದರಿಂದ ಸ್ಥಳದಲ್ಲೇ ಅವರಿಗೆ ನೋಟೀಸು ಜಾರಿಮಾಡಿರುತ್ತೇನೆ. ಸದರಿ ಸ್ಥಳದಲ್ಲಿ ನಾನು ಸಿಬ್ಬಂದಿಗಳೊಂದಿಗೆ ಮತ್ತು ಪಂಚರೊಂದಿಗೆ ನಿಂತು ರಸ್ತೆಗಾವಲು ನಡೆಸುತ್ತಿರುವಾಗ ಕಡೂರು ನಗರದ ಕಡೆಯಿಂದ ಒಬ್ಬ ವ್ಯಕ್ತಿ ಕೈಚೀಲವನ್ನು ಹಿಡಿದು ನಡೆದುಕೊಂಡು ಬರುತ್ತಿದ್ದು ಇಲಾಖಾ ವಾಹನ ಮತ್ತು ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಗಾಬರಿಗೊಂಡಿರುತ್ತಾನೆ. ಆತನನ್ನು ನಮ್ಮ ಇಲಾಖಾ ಸಿಬ್ಬಂದಿಗಳು ಸುತ್ತುವರಿದು ವಿಚಾರ ಮಾಡಲಾಗಿ ಆತನ ಕೈಚೀಲದಲ್ಲಿ ಅಕ್ರಮ ಮದ್ಯ ಇರುವುದು ಕಂಡುಬಂದಿರುತ್ತದೆ. ಶೋಧನೆ ಮಾಡಲು ಮಾನ್ಯ ನ್ಯಾಯಾಲಯದ ಶೋಧನಾ ಸಮುಚ್ಚಿತ ವಾರೆಂಟ್ ಪಡೆಯಲು ಸಮಯಾವಕಾಶ ಇಲ್ಲದೇ ಇರುವುದರಿಂದ ಅಬಕಾರಿ ಕಾಯಿದೆ 54 ರ ಅಡಿಯಲ್ಲಿ ಸ್ಥಳದಲ್ಲೇ ಶೋಧನಾ ವಾರೆಂಟ್ ತಯಾರಿಸಿರುತ್ತೇನೆ. ಸದರಿ ಪತ್ರಕ್ಕೆ ಪಂಚರ ಸಹಿ ಪಡೆದಿರುತ್ತೇನೆ. ನಂತರ ಪಂಚರ ಸಮಕ್ಷಮ ಸದರಿ ಚೀಲವನ್ನು ನೋಡಲಾಗಿ ಅದರೊಳಗೆ ಮದ್ಯ ತುಂಬಿದ 90 ಎಂಎಲ್ ನ ರಾಜಾವಿಸ್ಕಿ ಎಂದು ಬರೆದಿರುವ 50 ಸ್ಯಾಚೆಟ್ ಗಳು ಇರುವುದು ಕಂಡುಬಂದಿರುತ್ತದೆ. ಸ್ಯಾಚೆಟ್ ಗಳ ಮೇಲೆ ಅಂಟಿಸಲಾಗಿರುವ ಭದ್ರತಾ ಚೀಟಿಗಳನ್ನು ಹರಿದು ಹಾಕಲಾಗಿರುತ್ತದೆ ಆದ್ದರಿಂದ ಅದು ಎಲ್ಲಿಂದ ತಂದಿದ್ದು

ಎಂದು ಮಾಹಿತಿ ಇರುವುದಿಲ್ಲ. ಆರೋಪಿಗೆ ಸದರಿ ಮದ್ಯವನ್ನು ಸಾಗಾಣೆ ಮಾಡಲು ಪರವಾನಿಗೆ ಇದೆಯೇ ಎಂದು ಕೇಳಲಾಗಿ ಆತ ಪರವಾನಿಗೆ ಇಲ್ಲ ಎಂದು ನುಡಿದಿರುತ್ತಾನೆ. ಈ ರೀತಿ ಅಕ್ರಮ ಮದ್ಯವನ್ನ ಪರವಾನಿಗೆ ಇಲ್ಲದೆ ಸಾಗಾಣೆ ಮಾಡುವುದು ಅಬಕಾರಿ ಕಾಯಿದೆ ಪ್ರಕಾರ ಅಪರಾಧ ಎಂದು ಪಂಚರಿಗೆ ತಿಳಿಸಿ ನಂತರ ಪಂಚರ ಸಮಕ್ಷಮ ಸದರಿ ಮದ್ಯದ ಪೌಚುಗಳನ್ನು ಅದೇ ಚೀಲದಲ್ಲಿ ಹಾಕಿ ದಾರ ಹೊಲೆದು ಪಿ ಎಂಬ ಅಕ್ಷರದಿಂದ ಸೀಲು ಮಾಡಿ ನನ್ನ ಹಾಗೂ ಪಂಚರ ಸಹಿ ಇರುವ ಚೀಟಿಯನ್ನು ಮು.ಮಾ-1 ಚೀಲದ ಮೇಲೆ ಅಂಟಿಸಲಾಗಿರುತ್ತದೆ. ನಿಪಿ-1 ಪಂಚನಾಮೆಯನ್ನು ಪಂಚರ ಸಮಕ್ಷಮ ಅದೇ ದಿನ ಮದ್ಯಾಹ್ನ 2.00 ರಿಂದ 2.30 ರ ವರೆಗೆ ಜರುಗಿಸಿರುತ್ತೇನೆ. ಅದೇ ಸಮಯದಲ್ಲಿ ನಿಪಿ.6 ರಂತೆ ಛಾಯಾಚಿತ್ರವನ್ನು ತೆಗೆಯಲಾಗಿರುತ್ತದೆ. ನಂತರ ಅಮಾನತ್ತುಪಡಿಸಿಕೊಂಡ ಮು.ಮಾ. ಸಮೇತ ಪೊಲೀಸ್ ಠಾಣೆಗೆ ಬಂದು ನಿಪಿ-7 ರಂತೆ ವರದಿಯನ್ನು ತಯಾರಿಸಿರುತ್ತೇನೆ. ಆರೋಪಿ ವಿರುದ್ದ ನಿಪಿ-8 ರಂತೆ ಪ್ರ.ವ.ವರದಿಯನ್ನು ದಾಖಲು ಮಾಡಿರುತ್ತೇನೆ. ದಿ:07.04.2023 ರಂದು ಚಾಸಾ-7 ರವರಿಗೆ ಮುಂದಿನ ತನಿಖೆಗಾಗಿ ಕಡತವನ್ನು ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ಹಾಕಿದ ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**18.** ಪ್ರಾಸಾ-5 ಇವರು ತನಿಖಾಧಿಕಾರಿಯಾಗಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ದಿ:02.04.2023 ರಂದು ಚಾಸಾ-6 ರವರಿಂದ ಪ್ರಕರಣದ ಕಡತವನ್ನು ಪಡೆದು ತನಿಖೆ ಮುಂದುವರೆಸಿ, ದಿ:05.04.2023 ರಂದು ಚಾಸಾ- 1 ಮತ್ತು 2 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕ.11.04.2023 ರಂದು ಚಿತ್ರದುರ್ಗ ರಾಸಾಯನಿಕ ಪ್ರಯೋಗಾಲಯಕ್ಕೆ ರಾಸಾಯನಿಕ ವಿಶ್ಲೇಷಣಾ ವರದಿ ನೀಡುವಂತೆ ಕೋರಿ ವಶಪಡಿಸಿಕೊಂಡಿದ್ದ ಮುದ್ದೆಮಾಲುಗಳನ್ನು ನಿಪಿ.9 ರ ಮನವಿ ಪತ್ರದೊಂದಿಗೆ ಕಳುಹಿಸಿಕೊಟ್ಟಿರುತ್ತೇನೆ. ನಂತರ ದಿನಾಂಕ 13.04.2023 ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ನಿಪಿ.10 ರಂತೆ ಸ್ವೀಕರಿಸಿ ಕಡತಕ್ಕೆ ಲಗತ್ತಿಸಿಕೊಂಡಿರುತ್ತೇನೆ. ನಂತರ ದಿನಾಂಕ 14.04.2023 ಸಿಬ್ಬಂದಿಗಳಾದ ಚಾಸಾ-3 ಮತ್ತು ಚಾಸಾ-4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 07.04.2023 ರಂದು ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ನಿಪಿ-11 ರಂತೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ನಂತರ ಆರೋಪಿಯ ವಿರುದ್ಧ ದೋಷಾರೋಪಣೆಗಳು ಕಂಡುಬಂದಿದ್ದರಿಂದ ಆರೋಪಿಯ ವಿರುದ್ಧ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದ್ದು, ಅವರು ಹಾಕಿದ ಎಲ್ಲಾ ಸಲಹೆಗಳನ್ನು ಅಲ್ಲಗಳೆದಿರುತ್ತಾರೆ.

**19.** ಅಬಕಾರಿ ಕಾಯ್ದೆಯಡಿಯಲ್ಲಿ ದಾಳಿ ಮಾಡುವ ಒಂದು ಮಾಹಿತಿ ಬಂದರೆ ದಾಳಿ

KACM210046442023

ಮಾಡುವ ಪೂರ್ವದಲ್ಲಿ ಶೋಧನಾ ವಾರೆಂಟನ್ನು ಪಡೆದುಕೊಂಡು ದಾಳಿ ಮಾಡಬೇಕಾಗುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ದಾಳಿ ಮಾಡಿದ ಅಧಿಕಾರಿ ಶೋಧನಾ ವಾರೆಂಟನ್ನು ಪಡೆದುಕೊಂಡಿರುವುದಿಲ್ಲ ಮತ್ತು ಅದನ್ನು ಪಡೆದುಕೊಳ್ಳದೆ ಇದ್ದುದಕ್ಕೆ ಸಮಂಜಸವಾದ ಕಾರಣವನ್ನು ಸಹ ತಿಳಿಸಿರುವುದಿಲ್ಲ. ಅಬಕಾರಿ ಕಾಯ್ದೆಯಲ್ಲಿ ದಾಖಲಾದ ಪ್ರಕರಣವನ್ನು ಸಾಭೀತು ಪಡಿಸಲು ದಾಳಿ ಮಾಡಿದ ವ್ಯಕ್ತಿಯು ಅದರಲ್ಲಿ ನಮೂದಿಸಿರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಯಾವುದೇ ನಿಯಮಗಳನ್ನು ಪಾಲಿಸಿರುವುದಿಲ್ಲ. ಅಬಕಾರಿ ಕಾಯ್ದೆ ಅಡಿಯಲ್ಲಿ ದಾಖಲಾದ ಪ್ರಕರಣಗಳಲ್ಲಿ ಮದ್ಯವನ್ನು ಆರೋಪಿಯಿಂದಲೇ ವಶಪಡಿಸಿಕೊಂಡಿರುತ್ತಾರೆ ಎಂಬುದನ್ನು ರುಜುವಾತುಪಡಿಸುವುದು ಅತಿಮುಖ್ಯವಾಗಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಸ್ವತಂತ್ರ ಸಾಕ್ಷಿದಾರರಾದ ಪ್ರಾಸಾ-1 ಮತ್ತು 2 ರವರು ಅಭಿಯೋಜನೆಯವರ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷಿ ನುಡಿದಿದ್ದು, ಮದ್ಯದ ಪ್ಯಾಕೇಟುಗಳನ್ನು ಆರೋಪಿಯಿಂದಲೇ ವಶಪಡಿಸಿಕೊಂಡಿರುತ್ತಾರೆ ಎಂಬುದರ ಬಗ್ಗೆ ಯಾವುದೇ ಸಾಕ್ಷ ನುಡಿದಿರುವುದಿಲ್ಲ. ಪೋಲಿಸ್ ಅಧಿಕಾರಿಗಳ ಸಾಕ್ಷ್ಯಗಳನ್ನು ಪರಿಗಣಿಸಬಾರದು ಎಂಬ ಯಾವುದೇ ನಿಯಮ ಇಲ್ಲ. ಆದರೆ ಇಂತಹ ಪ್ರಕರಣಗಳಲ್ಲಿ ಮುದ್ದೆಮಾಲುಗಳನ್ನು ಆರೋಪಿಯಿಂದಲೇ

ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದು ನ್ಯಾಯಾಲಯಕ್ಕೆ ಖಚಿತಪಡಿಸಲು ಅಧಿಕಾರಿಗಳ ಸಾಕ್ಷ್ಯದ ಜೊತೆಗೆ ಸ್ವತಂತ್ರ ಸಾಕ್ಷಿದಾರರ ಸಾಕ್ಷ್ಯವು ಸಹ ಪೂರಕವಾಗಿರಬೇಕಾಗುತ್ತದೆ. ಹಾಗಾಗಿ ಪ್ರಾಸಾ-3 ರಿಂದ 5 ರವರ ಸಾಕ್ಷ್ಯಕ್ಕೆ ಪೂರಕವಾಗಿ ಪ್ರಾಸಾ-1 ಮತ್ತು 2 ರವರು ಸಾಕ್ಷ್ಯ ನುಡಿದಿರುವುದಿಲ್ಲ. ಪ್ರಾಸಾ-3 ರಿಂದ 5 ರವರ ಸಾಕ್ಷ್ಯಕ್ಕೆ ಸ್ವತಂತ್ರ ಸಾಕ್ಷಿದಾರರು ಎನ್ನಲಾದ ಪ್ರಾಸಾ-1 ಮತ್ತು 2 ರವರ ಸಾಕ್ಷ್ಯವು ಅತ್ಯವಶ್ಯಕವಾಗಿರುತ್ತದೆ. ಆದ್ದರಿಂದ ಪ್ರಾಸಾ-3 ರಿಂದ 5 ರವರ ಸಾಕ್ಷ್ಯವು ಅಭಿಯೋಜನೆಯವರು ಆರೋಪಿಯ ವಿರುದ್ಧ ಹೊರೆಸಿರುವ ಆರೋಪಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಸಹಕಾರಿಯಾಗಿರುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತಾ, ಅಭಿಯೋಜನೆಯವರು ಆರೋಪಿಯ ವಿರುದ್ಧ ಹೊರೆಸಿರುವ ಆರೋಪಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲರಾಗಿರುವ ಹಿನ್ನಲೆಯಲ್ಲಿ ಅಂಶ-1 ನ್ನು ನ್ಯಾಯಾಲಯವು ನಕಾರಾತ್ಮಕವಾಗಿ ಉತ್ತರಿಸುತ್ತದೆ.

**20. ಅಂಶ 2:** ಈ ಮೇಲ್ಕಂಡಂತೆ ಚರ್ಚಿಸಿ ಬಂದ ನಿರ್ಣಯದಂತೆ ಈ ನ್ಯಾಯಾಲಯವು ಕೆಳಕಂಡಂತೆ ಆದೇಶಿಸುತ್ತಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ **248(1)**ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿಯ

KACM210046442023

ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ **1965** ಕಲಂ **14(2), 15, 32(1)** ರಡಿಯಲ್ಲಿ ಆರೋಪವು ಸಾಬೀತಾಗದ ಕಾರಣ ಆರೋಪಿಯನ್ನು ದೋಷಮುಕ್ತನನ್ನಾಗಿ ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **437(ಎ)** ರ ರೀತ್ಯಾ ಆರೋಪಿ ಒದಗಿಸಿರುವ ಜಾಮೀನು ಇನ್ನು **6** ತಿಂಗಳುಗಳ ಕಾಲ ಚಾಲ್ತಿಯಲ್ಲಿರುತ್ತದೆ.

ಈ ಪ್ರಕರಣದ ಸ್ವತ್ತು ಪಟ್ಟಿ ಸಂಖ್ಯೆ**:37/2022-23** ದಿನಾಂಕ:**30.03.2023** ರ **(ಪಿ.ಆರ್.219/2023)** ಮೂಲಕ ಅಮಾನತ್ತುಪಡಿಸಿಕೊಂಡ ಮು.ಮಾ-**1** ಮತ್ತು **2** ಖಾಲಿ ಮಧ್ಯದ ಪೌಚುಗಳು ಹಾಗೂ ಒಂದು ಪ್ಲಾಸ್ಟಿಕ್ ಚೀಲ ಬೆಲೆಬಾಳದ ವಸ್ತುಗಳಾಗಿರುವ ಕಾರಣ ಮೇಲ್ಮನವಿಯ ಅವಧಿ ಮುಗಿದ ನಂತರ ಅದನ್ನು ನಾಶ ಪಡಿಸಲು ಆದೇಶಿಸಿದೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೂಲಕ ನೇರವಾಗಿ ಉಕ್ತಲೇಖನ ನೀಡಿ, ಪರಿಶೀಲಿಸಿ ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ **1** ನೇ ಮಾರ್ಚ್ **2025** ರಂದು ಘೋಷಿಸಿದ್ದೇನೆ).

ಸಹಿ/-
**(**ಶ್ರೀಮತಿ ಸವಿತರಾಣಿ ಹೆಚ್.ವಿ.**)**
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕಡೂರು.

ಅನುಬಂಧ

ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರು:

| | | |
|---|---|---|
| ಪ್ರಾಸಾ : 1 | : | ಶ್ರೀ ಮುರುಳಿ |
| ಪ್ರಾಸಾ : 2 | : | ಶ್ರೀ ಪ್ರಸನ್ನ |

KACM210046442023

| | | |
|---|---|---|
| ಪ್ರಾಸಾ : 3 | : | ಶ್ರೀಮತಿ ಮಂಜುಳ |
| ಪ್ರಾಸಾ : 4 | : | ಶ್ರೀ ಶಿವರುದ್ರಯ್ಯ ಸಿ |
| ಪ್ರಾಸಾ : 5 | : | ಶ್ರೀ ನಾಗೇಂದ್ರ ಎಸ್ |

ಅಭಿಯೋಜನೆಯ ಪರ ಗುರ್ತಿಸಲ್ಪಟ್ಟ ದಾಖಲೆಗಳು:

| | | |
|---|---|---|
| ನಿಪಿ : 1 | : | ಸ್ಥಳ ಮಹಜರ್ |
| ನಿಪಿ : 1(ಎ) | : | ಪ್ರಾಸಾ.1 ರವರ ಸಹಿ |
| ನಿಪಿ : 1(ಬಿ) | : | ಪ್ರಾಸಾ.2 ರವರ ಸಹಿ |
| ನಿಪಿ : 1(ಸಿ) | : | ಪ್ರಾಸಾ.3 ರವರ ಸಹಿ |
| ನಿಪಿ : 2 | : | ಪೋಲೀಸ್ ನೋಟಿಸ್ |
| ನಿಪಿ : 2(ಎ) | : | ಪ್ರಾಸಾ.1 ರವರ ಸಹಿ |
| ನಿಪಿ : 2(ಬಿ) | : | ಪ್ರಾಸಾ.4 ರವರ ಸಹಿ |
| ನಿಪಿ : 3 | : | ಪ್ರಾಸಾ.1 ರವರ ಹೇಳಿಕೆ |
| ನಿಪಿ : 4 | : | ಪೋಲಿಸ್ ನೋಟಿಸ್ |
| ನಿಪಿ : 4(ಎ) | : | ಪ್ರಾಸಾ.2 ರವರ ಸಹಿ |
| ನಿಪಿ : 4(ಬಿ) | : | ಪ್ರಾಸಾ.4 ರವರ ಸಹಿ |
| ನಿಪಿ : 5 | : | ಪ್ರಾಸಾ.2 ರವರ ಹೇಳಿಕೆ |
| ನಿಪಿ : 6 | : | ಛಾಯಾಚಿತ್ರ |
| ನಿಪಿ : 7 | : | ವರದಿ |
| ನಿಪಿ : 7(ಎ) | : | ಪ್ರಾಸಾ.4 ರವರ ಸಹಿ |
| ನಿಪಿ : 8 | : | ಪ್ರಥಮ ವರ್ತಮಾನ ವರದಿ |
| ನಿಪಿ : 8(ಎ) | : | ಪ್ರಾಸಾ.4 ರವರ ಸಹಿ |
| ನಿಪಿ : 9 | : | ರಾಸಾಯನಿಕ ವರದಿ ಕೋರಿ ಬರೆದ ಪತ್ರ |
| ನಿಪಿ : 9(ಎ) | : | ಪ್ರಾಸಾ.5 ರವರ ಸಹಿ |
| ನಿಪಿ : 10 | : | ರಸಾಯನಿಕ ವಿಶ್ಲೇಷಣಾ ವರದಿ |
| ನಿಪಿ : 10(ಎ) | : | ಪ್ರಾಸಾ.5 ರವರ ಸಹಿ |
| ನಿಪಿ : 11 | : | ಆರೋಪಿಯ ಸ್ವ-ಇಚ್ಛಾ ಹೇಳಿಕೆ |
| ನಿಪಿ : 11(ಎ) | : | ಪ್ರಾಸಾ.5 ರವರ ಸಹಿ |

KACM210046442023

<u>ಅಭಿಯೋಜನೆಯ ಪರ ಗುರ್ತಿಸಿಕೊಳ್ಳಲಾದಂತಹ ಮುದ್ದೆ ಮಾಲುಗಳು:</u>

| | | |
|---|---|---|
| ಮುದ್ದೆ ಮಾಲು 1 | : | ರಾಸಾಯನಿಕ ಪರೀಕ್ಷೆಗೆ ಒಳಗಾಗಿ ವಾಪಾಸ್ಸಾದ ಖಾಲಿ ಮಧ್ಯದ ಪೌಚುಗಳು |
| ಮುದ್ದೆ ಮಾಲು 2 | : | ಒಂದು ಪ್ಲಾಸ್ಟಿಕ್ ಚೀಲ |

<u>ಆರೋಪಿ ಪರ ವಿಚಾರಣೆಗೆ ಒಳಪಟ್ಟ ಸಾಕ್ಷಿದಾರರು:</u>

- ಇರುವುದಿಲ್ಲ -

<u>ಆರೋಪಿ ಪರ ಗುರ್ತಿಸಲ್ಪಟ್ಟ ದಾಖಲೆಗಳು:</u>

- ಇರುವುದಿಲ್ಲ-

ಸಹಿ/-
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕಡೂರು.

**<u>Visit ecourts.gov.in for updates or download mobile app “eCourts Services” from Android or iOS</u>**